ಸಾಕ್ಷಿಯನ್ನು ದಿನಾಂಕ 02-08-2023 ರಂದು ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀಮತಿ.ವಿ ಹೆಚ್ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಇರುವುದನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತು. ಈ ದಾವೆಯಲ್ಲಿ ಯಾರು ಯಾರು ಪಕ್ಷಗಾರರಿದ್ದಾರೆ ಎಂದು ಗೊತ್ತು. ನನ್ನ ದೊಡ್ಡಪ್ಪ ಹಾಗೂ ಅತ್ತೆ ವಿರುದ್ಧ ದಾವೆ ಸಲ್ಲಿಸಿದ್ದೇನೆ. ನನ್ನ ಅತ್ತೆಯವರಿಗೆ ಎಷ್ಟು ಪಾಲು ಇದೆ ಎಂದು ಕೇಳಿದರೆ ನಿಖರವಾಗಿ ಹೇಳಲು ಗೊತ್ತಿಲ್ಲ ಎಂದು ನುಡಿಯುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರ ಎಷ್ಟು ಎಂದು ಕೇಳಿದರೆ ನಿಖರವಾಗಿ ಹೇಳಲು ಗೊತ್ತಿಲ್ಲ ಎಂದು ನುಡಿಯುತ್ತೇನೆ. ದಾವಾ ಆಸ್ತಿಗಳ ಚಕಬಂದಿ ಹೇಳಲು ಗೊತ್ತಿಲ್ಲ. ಸಾಮಾನ್ಯವಾಗಿ ಹೇಳುವುದಾದರೆ ತಂದೆಯ ಆಸ್ತಿಯು ಮಕ್ಕಳಿಗೆ ಬರುತ್ತೆ ಎಂದರೆ ನಿಜ. ಯಲ್ಲಪ್ಪ ಬರದ್ವಾಡ್ ರವರು ಜೀವಂತ ಕಾಲದಲ್ಲಿಯೇ ತನ್ನ ಮಕ್ಕಳಿಗೆ ಆಸ್ತಿಯ ವಾಟ್ನಿ ಮಾಡಿಕೊಟ್ಟಿದ್ದಾರೆ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಇನ್ನೂ ಕೆಲವು ಆಸ್ತಿಗಳು ಇದ್ದವು ಹಾಗೂ ವಿಲ್ ಪ್ರಕಾರ ಮಾಡಿದ್ದರು ಹಾಗೂ ಇವಾಗ ಆ ರೀತಿ ವಿಲ್ ಇದೆ ಎಂದು ಹೇಳುತ್ತಿರುವುದು ಹಾಗೂ ಪ್ರತಿವಾದಿಯರೇ ಮಾಡಿಕೊಂಡಿರುವುದು ಎಂದು ಈ ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತೇನೆ. ಯಾವ ಯಾವ ಆಸ್ತಿಗಳು ಈಗಾಗಲೇ ವಾಟ್ನಿಯಾಗಿದೆ ಎಂಬುದರ ಕುರಿತು ವಿವರಗಳನ್ನು ನ್ಯಾಯಾಲಯಕ್ಕೆ ದಾಖಲೆಗಳ ಸಹಿತ ಹಾಜರಪಡಿಸಿದ್ದೇನೆಯೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಯಾವ ಆಸ್ತಿಗಳಿಗೆ ವಾಟ್ನಿಯಾಗಿಲ್ಲ ಎಂಬುದನ್ನು ಕೂಡ ತಿಳಿಸಿದ್ದೇನೆಯೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಅದು ಯಾವ ಆಸ್ತಿಗಳು ಎಂದು ನಿಖರವಾಗಿ ಹೇಳಲು ಸೂಚಿಸಿದರ ಆ ರೀತಿ ಹೇಳಲು ಗೊತ್ತಿಲ್ಲ ಎಂದು ನುಡಿಯುತ್ತೇನೆ. ದಿಃ05/06/1986 ರಲ್ಲಿಯೇ ಯಲ್ಲಪ್ಪ ಬರದ್ವಾಡ್ ರವರು ನನ್ನ ತಂದೆ ಹಾಗೂ ಅವರ ಸಹೋದರರಿಗೆ ವಾಟ್ನಿ ಮಾಡಿಕೊಟ್ಟಿದ್ದರು ಎಂದರೆ ಅವಾಗ ವಾಟ್ನಿ ಮಾಡಿಕೊಟ್ಟಿದ್ದು ನಿಜ ಅದರೆ ಇನ್ನೂ ಸ್ವಲ್ಪ ಆಸ್ತಿಗಳು ವಾಟ್ನಿಯಾಗದೇ ಇದ್ದವು ಎಂದು ನುಡಿಯುತ್ತೇನೆ. ಅದು ಯಾವ ಆಸ್ತಿಗಳು ಎಂದು ಕೇಳಿದರೆ ಆ ರೀತಿ ಹೇಳಲು ಗೊತ್ತಿಲ್ಲ

ಎಂದು ನುಡಿಯುತ್ತೇನೆ. ಈಗ ವಾಟ್ನಿಯಾಗದೇ ಉಳಿದಿರುವ ಆಸ್ತಿಗಳು ಯಾವುದು ಎಂದು ಕೇಳಿದರೆ ಆ ರೀತಿ ಹೇಳಲು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತೇನೆ. ಆದ್ದರಿಂದ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದು ಸೂಚಿಸಿದರೆ ಆ ರೀತಿ ಸೂಚಿಸಿರುವುದನ್ನು ಒಪ್ಪುವುದಿಲ್ಲ ಎಂದು ನುಡಿಯುತ್ತೇನೆ. 1986 ರಲ್ಲಿ ಮಾಡಿಕೊಟ್ಟಿರುವ ವಾಟ್ನಿ ಪ್ರಕಾರ ಆಯಾಯ ಹಿಸ್ಸೆದಾರರು ಅವರವರ ಹಿಸ್ಸೆಯ ಆಸ್ತಿಗಳನ್ನು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ನಿಜ. ಹಾಗಿದ್ದಲ್ಲಿ ನನ್ನ ತಂದೆಯ ವಿರುದ್ಧ ಮಾತ್ರ ದಾವೆ ಸಲ್ಲಿಸಬಹುದಿತ್ತಲ್ಲವೇ ಎಂದು ಕೇಳಿದರೆ ಎಲ್ಲ ಆಸ್ತಿಗಳ ಖಾತೆ ಜಂಟಿಯಾಗಿ ಇದ್ದ ಕಾರಣ ಸದರಿ ಎಲ್ಲ ಆಸ್ತಿಗಳು ಅಂದರೆ 21 ಎಕರೆ ಅಂದಾಜು ಆಸ್ತಿಗಳ ಮೇಲೆ ದಾವೆ ಮಾಡಿದ್ದು ಎಂದು ನುಡಿಯುತ್ತೇನೆ. ನಾನು ಹಿಸ್ಸೆ ಕೇಳದೇ ಇದ್ದರೂ ಕೂಡ ಅನವಶ್ಯಕವಾಗಿ ದಾವೆ ಸಲ್ಲಿಸಿರುವುದು ಎಂದರೆ ಸರಿಯಲ್ಲ. ನಾನು ಆ ರೀತಿ ಹಿಸ್ಸೆ ಕೇಳಿದ್ದೇನೆ ಎಂದು ತೋರಿಸಲು ದಾಖಲೆ ಇದೆಯೇ ಎಂದು ಕೇಳಿದರೆ ಅದಕ್ಕೆಲ್ಲ ದಾಖಲೆ ಇಲ್ಲ ಮೌಖಿಕವಾಗಿ ಕೇಳಿದ್ದು ಎಂದು ನುಡಿಯುತ್ತೇನೆ. ನನ್ನ ತಂದೆಗೆ ಬಂದಿರುವ ಹಿಸ್ಸೆಯಲ್ಲಿ ಮಾತ್ರ ನನಗೆ ಪಾಲು ಇರುವುದು ಎಂದರೆ ನನ್ನ ತಾತಾನಿಂದ ಬಂದಿರುವ ಎಲ್ಲ ಪಿತ್ರಾರ್ಜಿತ ಆಸ್ತಿಯಲ್ಲೂ ನನಗೆ ಹಿಸ್ಸೆ ಹಕ್ಕು ಇದೆ ಎಂದು ನುಡಿಯುತ್ತೇನೆ. 1986 ರಲ್ಲಿಯೇ ನನ್ನ ಅಜ್ಜ ವಾಟ್ನಿ ಮಾಡಿಕೊಟ್ಟಿದ್ದಾರೆ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಎಲ್ಲ ಆಸ್ತಿಗಳನ್ನು ವಾಟ್ನಿ ಮಾಡಿಲ್ಲ. ನನ್ನ ತಂದೆಗೆ ಹಾಗೂ ನನಗೆ ಭಿನ್ನಾಭಿಪ್ರಾಯ ಇರುವುದರಿಂದ ದೊಡ್ಡಪ್ಪ ಚಿಕ್ಕಪ್ಪಂದಿರನ್ನು ಕೂಡ ಈ ದಾವೆಯ ಪಕ್ಷಗಾರನ್ನಾಗಿ ಸೇರಿಸಿದ್ದೇನೆ ಎಂದರೆ ಅದರಲ್ಲಿ ವೈಯ್ಯಕ್ತಿಕ ಏನೂ ಇಲ್ಲ ಎಂದು ನುಡಿಯುತ್ತೇನೆ. ಅನವಶ್ಯಕವಾಗಿ 1 ರಿಂದ 3 ನೇ ಪ್ರತಿವಾದಿಯವರಿಗೆ ಮಾನಸಿಕ ಕಿರುಕಳ ನೀಡಲು ಪಕ್ಷಗಾರರನ್ನಾಗಿ ಮಾಡಿರುವುದು ಎಂದರೆ ಸರಿಯಲ್ಲ. ವಿಲ್ ನಾವೆಯನ್ನು ನಾನು ಹಾಜರಪಡಿಸಿದ್ದೇನೆಯೇ ಎಂದು ಕೇಳಿದರೆ ಹಾಜರಪಡಿಸಿದ್ದೇನೆ ಎಂದು ನುಡಿಯುತ್ತೇನೆ.

ಅದು ಯಾವ ಅಸ್ತಿಯ ಕುರಿತಾಗಿ ಇದೆ ಎಂದು ಕೇಳಿದರೆ ಹೇಳಲು ಗೊತ್ತಿಲ್ಲ ಎಂದು ನುಡಿಯುತ್ತೇನೆ.

**ಪಾಟಿ ಸವಾಲು ಶ್ರೀ ಎಸ್ ಎಸ್ ಟಿ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.